3. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ:– ರಾಜ್ಯದ ಗಡಿಯನ್ನು ತಮಿಳುನಾಡಿನವರು ಆಕ್ರಮಿಸಿಕೊಂಡಿರುವ ಬಗ್ಗೆ

ಅಧ್ಯಕ್ಷರು : ಈಗ ಒಂದು ಪ್ರಶ್ನೆ ನಮ್ಮ ಮುಂದಿದೆ. ಇವೊತ್ತು ಮಧ್ಯಹ್ನ ಏನೆ ಆಗಲಿ 2 ಗಂಟೆಗೆ ಮುಗಿಸಬೇಕು. ಮ್ಯಾಕ್ಸಿಮಮ್ ಎಂದರೂ 2–30 ಗಂಟೆಗೆ ಕ್ಲೋಸ್ ಮಾಡಬೇಕಾಗಿದೆ. 2–30 ಕ್ಕೆ ಚರ್ಚೆ ಮುಗಿಸಿ ಸೋಮವಾರದ ದಿವಸ ರಿಪ್ಲೈಗೆ ತೆಗೆದುಕೊಳ್ಳೋಣ. ಇವೊತ್ತು ಶೂನ್ಯ ವೇಳೆ ಮತ್ತು ಈ ಎರಡೂ ಗಮನ ಸೆಳೆಯುವ ಸೂಚನೆಗಳಿವೆ. ಅದನ್ನು ಸೋಮವಾರ ತೆಗೆದುಕೊಳ್ಳೋಣ ಎಂದು ನನ್ನ ಸೆಜೆಶನ್. ಏಕೆಂದರೆ ಮಾತನಾಡುವವರು ಇನ್ನೂ ಬಹಳ ಜನರು ಇದ್ದಾರೆ.

ಶ್ರೀ ಹೆಚ್.ಎಸ್. ಮಹದೇವ್‌ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನ ಶೂನ್ಯ ವೇಳೆಯಲ್ಲಿ ರಾಜ್ಯದ ಗಡಿಯನ್ನು ಆಕ್ರಮಿಸಿರುವ ಬಗ್ಗೆ ಪ್ರಸ್ತಾಪ ಮಾಡಿದ್ದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ಮೂರು ದಿವಸಗಳಿಂದ ಒಂದು ವಿಷಯ ಪ್ರಸ್ತಾಪ ಮಾಡಲು ಕಾಯುತ್ತಿದ್ದೇನೆ.

ಅಧ್ಯಕ್ಷರು : ಇವೊತ್ತು ಬೇಡಿ. ಸೋಮವಾರದ ದಿನ ಡೆಫನೆಟ್ಲಿ ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಎರಡು ನಿಮಿಷದಲ್ಲಿ ನಾನು ಮೆನ್‌ಶನ್ ಮಾಡಿಬಿಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ನಿನ್ನೆಯ ದಿನ ಪ್ರಸ್ತಾಪ ಮಾಡಿದಾಗ ಇವೊತ್ತು ಉತ್ತರ ಕೊಡುತ್ತೇವೆ ಎಂದು ಹೇಳಿದ್ದರು.

ಅಧ್ಯಕ್ಷರು : ಸೋಮವಾರ ಕೊಡುತ್ತಾರೆ ಬಿಡಿ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಖಾಸಗಿ ನಿರ್ಣಯ 28ನೇ ಏಪ್ರಿಲ್ 2000ನೇ ಇಸವಿಯಲ್ಲಿ ಮೂವ್ ಆಗಿ ಈಗ 2003ನೇ ಇಸವಿಗೆ ಬಂದರೂ ಕೂಡ ಇನ್ನೂ ಇದರ ಬಗ್ಗೆ ಚರ್ಚೆಯೇ ಆಗಿಲ್ಲವೆಂದರೆ ನಾವು ಕಳುಹಿಸಿದ್ದಕ್ಕೆ ಏನು ಬೆಲೆ ಅಧ್ಯಕ್ಷರೆ? ಚರ್ಚೆಗೆ ಅವಕಾಶವೇ ಆಗುವುದಿಲ್ಲವೆಂದರೆ ಸದಸ್ಯರ ಹಕ್ಕು ಮೊಟಕು ಮಾಡಿದಂತಾಗುವುದಿಲ್ಲವೆ? ಅವಕಾಶ ಮಾಡಿಕೊಡಬೇಕು ಅಧ್ಯಕ್ಷರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಆ) ಹಕ್ಕುಚ್ಯುತಿ ಪ್ರಸ್ತಾಪ

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸದಸ್ಯನಾದ ನನ್ನ ಹಕ್ಕಿನ ಪ್ರಶ್ನೆ ಇದು. ತಾವು ಅಧ್ಯಕ್ಷರಾಗಿ ಇದನ್ನು ಪ್ರಸ್ತಾಪ ಮಾಡಲು ಎರಡು ನಿಮಿಷಗಳ ಕಾಲ ನನಗೆ ಅವಕಾಶ ಕೊಡದಿದ್ದರೆ ನಾವು ಇನ್ನು ಎಲ್ಲಿ ಹೋಗಿ ಕೇಳಬೇಕು. ಎಲ್ಲಿ ಹೋಗಿ ಕೇಳಬೇಕು ಹೇಳಿ ತಾವು.. ಎರಡೇ ನಿಮಿಷ. ನಾನೇನೂ ಭಾಷಣ ಮಾಡುವುದಿಲ್ಲ.

ಅಧ್ಯಕ್ಷರು : ಈಗ ಅವರು ಏನು ಹೇಳುತ್ತಾರೆಂದರೆ ಯಾವುದೇ ಪ್ರೋಗ್ರಾಂನ್ನು ಸೋಮವಾರ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಿಮಗೂ ಹಕ್ಕು ಇದ್ದ ಹಾಗೆ ಬೇರೆಯವರಿಗೂ

ಹಕ್ಕು ಇರುತ್ತದೆಯಲ್ಲವೇ? ನಿಮಗೆಷ್ಟು ನಿಮ್ಮ ಪ್ರಶ್ನೆ ಅರ್ಜೆನ್ಸಿ ಇದೆಯೋ ಹಾಗೆಯೇ ಬೇರೆಯವರಿಗೂ ಅವರದ್ದು ಅಷ್ಟೇ ಅರ್ಜೆನ್ಸಿ ಇರುತ್ತದೆ. ಸೋಮವಾರ ಹಂಡ್ರೆಡ್ ಪರ್ಸೆಂಟ್ ಅವಕಾಶ ಕೊಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ ಸೋಮವಾರ ಎಲ್ಲರಿಗೂ ಉತ್ತರ ಕೊಡುವುದು ಇದೆ. ನಾನು ಇಷ್ಟು ಹೊತ್ತಿಗೆ ಅವಕಾಶವನ್ನು ಕೊಟ್ಟಿದ್ದರೆ ವಿಷಯವನ್ನು ಪ್ರಸ್ತಾಪ ಮಾಡಿ ಮುಗಿಸುತ್ತಾ ಇದ್ದೆ.

ಅಧ್ಯಕ್ಷರು : ಇಲ್ಲ, ಅಷ್ಟು ಬೇಗ ಮುಗಿಸುವುದಿಲ್ಲ, ಅಷ್ಟು ಸುಲಭವಲ್ಲ. ಉತ್ತರವಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ಯಾವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಿಮಗೆ ನಾನು ರೈಟಿಂಗ್‌ನಲ್ಲಿ ಕೊಟ್ಟಿದ್ದೇನೆ, ಅದನ್ನು ರೈಸ್ ಮಾಡುವುದಷ್ಟೆ.

Mr. Speaker : Don't worry. i will directly refer it to the Privilege Committee.

ಶ್ರೀ ಆರಗ ಜ್ಞಾನೇಂದ್ರ : ಅಧ್ಯಕ್ಷರೆ, ನಾನು ಏನು ಮಾಡುತ್ತೇನೆಂಬುದು ಈ ಸದನಕ್ಕೆ ಗೊತ್ತಾಗಬಾರದೇ, ನಾನು ವಿಷಯವನ್ನು ರೈಸ್ ಮಾಡುತ್ತೇನೆ.

ಅಧ್ಯಕ್ಷರು : ಬೇಡ, ತಾವು ಸೋಮವಾರ ರೈಸ್ ಮಾಡಿ, after the reply ನೀವು ರೈಸ್ ಮಾಡಿ,

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ಎರಡು ನಿಮಿಷ ಮಾತ್ರ ತೆಗೆದುಕೊಳ್ಳುತ್ತೇನೆ. ತಾವು ಏಕೆ ಇಷ್ಟೊಂದು ಹಠ ಮಾಡುತ್ತಿದ್ದೀರಿ.

ಅಧ್ಯಕ್ಷರು : ನೀವು ಎರಡು ನಿಮಿಷಗಳಲ್ಲಿ ಮುಗಿಸುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ನಾನು ಮುಗಿಸುತ್ತೇನೆ, ನಾನು ಮುಗಿಸಲಿಲ್ಲವೆಂದರೆ ಬೆಲ್ ಮಾಡಿ.

ಅಧ್ಯಕ್ಷರು : ನಿಮಗೆ ಅವಕಾಶವನ್ನು ಕೊಟ್ಟರೆ ಬೇರೆಯವರಿಗೂ ಕೊಡಬೇಕಾಗುತ್ತದೆ. ಇದು ನನ್ನ ಮುಂದೆ ಈಗ ಇರುವಂತಹ ಪ್ರಶ್ನೆ.

ಶ್ರೀ ಆರಗ ಜ್ಞಾನೇಂದ್ರ : ನಾನು ಬೇರೆಯವರು ಹಾಗೆ ನಿಂತುಕೊಂಡಾಗ ಹಾಗೆ ನಾನು ಕೇಳಿಲ್ಲ, ನಮ್ಮ ಹಕ್ಕುಬಾಧ್ಯತೆಯನ್ನು ಕಾಪಾಡುವಂಥವರು ನೀವು. ನಮ್ಮ ಮರ್ಯಾದೆ ಎಲ್ಲಾ ಹೊರಗಡೆ ಹರಾಜು ಆಗುತ್ತಿದೆ: ನಮ್ಮನ್ನು ತಾವು ರಕ್ಷಣೆ ಮಾಡುವುದಿಲ್ಲವೆಂದರೆ ಅರ್ಥವೇನು?

Mr. Speaker : I am not refusing.

ನಾನು ತಿರಸ್ಕಾರ ಮಾಡುತ್ತಿಲ್ಲವಲ್ಲಾ, ಈ ವಿಷಯವನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ ಪ್ರಶ್ನೆ ಹಾಕಿದ್ದೇನೆ, ನೀವು ನನಗೆ ಅವಕಾಶ ಕೊಡಲು ನಿರಾಕರಿಸುತ್ತಿದ್ದೀರಿ.

ಅಧ್ಯಕ್ಷರು : ನಾನು ನಿರಾಕರಿಸಿಲ್ಲ. don't say like t1hat. ನಾನು ಸೋಮವಾರ ಸೋಮವಾರ ಈ ವಿಷಯವನ್ನು ತೆಗೆದುಕೊಳ್ಳೋಣವೆಂದು ಹೇಳಿದ್ದೇನೆ. ನಾನು ನಿರಾಕರಿಸಿಲ್ಲ. ನೀವು ಇಲ್ಲದೇ ಇರುವುದನ್ನೆಲ್ಲಾ ಹೇಳಬೇಡಿ ಸೋಮವಾರ ತೆಗೆದುಕೊಳ್ಳೋಣ. ಈಗ ಮಾನ್ಯ ಬಿ. ಸೋಮಶೇಖರ್‌ರವರು ಮಾತನಾಡಲಿ.